# ಕರಿಮೆಣಸು ಬೆಳೆಯ ಸುಧಾರಿತ ಬೇಸಾಯ ಕ್ರಮಗಳು

ಕರಿಮೆಣಸು ಪೈಪರ್ ನೈಗ್ರಮ್ ಸಸ್ಯನಾಮದ ಪೈಪೆರೇಸಿ ಸಸ್ಯ ಕುಟುಂಬಕ್ಕೆ ಸೇರಿದ ಬಹುವಾರ್ಷಿಕ ಸಾಂಬಾರ ಬೆಳೆ. ಇದನ್ನು ಸಂಬಾರು ಬೆಳೆಗಳ 'ರಾಜ' ಎಂದು ಕರೆಯುತ್ತಾರೆ. ದಕ್ಷಿಣ ಕನ್ನಡಾದ್ಯಂತ ಅಡಿಕೆ ಮತ್ತು ತೆಂಗು ತೋಟಗಳಲ್ಲಿ ಮಿಶ್ರ ಬೆಳೆಯಾಗಿ ಸುಮಾರು 3558 ಹೆಕ್ಟೇರು ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.

**ಮಣ್ಣು :** ಈ ಬೆಳೆಗೆ ಫಲವತ್ತಾದ ಹೆಚ್ಚು ಸಾವಯವ ಪದಾರ್ಥಗಳಿಂದ ಕೂಡಿದ ನೀರು ಬಸಿದು ಹೋಗುವಂತಹ ಮಣ್ಣಿನ ರಸಸಾರ 4.5 ರಿಂದ 6.5 ರವರೆಗೆ ಇರುವ ಮಣ್ಣು ಸೂಕ್ತ.

**ಹವಾಗುಣ:** ಕರಿಮೆಣಸು ತಂಪು ಉಷ್ಣತೆ ಬಯಸುವ ಬೆಳೆಯಾಗಿದ್ದು, ಸಾಕಷ್ಟು ಮಳೆ ಮತ್ತು ತಂಪು ಇರುವ ಹವಾಗುಣ ಅಗತ್ಯ. ಪಶ್ಚಿಮ ಘಟ್ಟ ಪರ್ವತ ಶ್ರೇಣಿಯ ತಂಪು ಮತ್ತು ಉಷ್ಣ ಹವೆಯನ್ನು ಹೊಂದಿರುವ ಹವಾಗುಣ ಕರಿಮೆಣಸು ಕೃಷಿಗೆ ಅತ್ಯುತ್ತಮ

**ಬಿತ್ತನೆ ಕಾಲ :** ಜೂನ್–ಜುಲೈ

**ತಳಿಗಳು:** ಪನಿಯೂರ್–1 ಮತ್ತು ಪನಿಯೂರ್–3 ಹೈಬ್ರೀಡ್ ತಳಿಗಳನ್ನು ಕರಿಮೆಣಸು ಸಂಶೋಧನಾ ಕೇಂದ್ರ, ಪನಿಯೂರ್‌ನಿಂದ ಬಿಡುಗಡೆ ಮಾಡಲಾಗಿದೆ.

- ಐ.ಐ.ಎಸ್.ಆರ್ ಗಿರಿಮುಂಡ ಮತ್ತು ಐ.ಐ.ಎಸ್.ಆರ್ ಮಲಬಾರ್ ಎಕ್ಸೆಲ್ ಎಂಬ ಎರಡು ಹೈಬ್ರೀಡ್ ತಳಿಗಳನ್ನು ಭಾರತೀಯ ಸಂಬಾರ ಬೆಳೆಗಳ ಸಂಶೋಧನಾ ಕೇಂದ್ರ, ಕಲ್ಲಿಕೋಟೆಯಿಂದ ಬಿಡುಗಡೆ ಮಾಡಲಾಗಿದೆ.
- ಪನಿಯೂರ್ 1,2,3,4,5,6,7 (ಕೇರಳ ಕೃಷಿ ವಿಶ್ವವಿದ್ಯಾನಿಲಯ), ಶುಭಕರ, ಶ್ರೀಕರ, ಪಂಚಮಿ, ಪೌರ್ಣಮಿ, ಐ.ಐ.ಎಸ್.ಆರ್ ಶಕ್ತಿ (ಬೇರು ಕೊಳೆರೋಗವನ್ನು ತಡೆದುಕೊಳ್ಳುತ್ತದೆ). ಐ.ಐ.ಎಸ್.ಆರ್ ತೇವಮ್, (ಕೊಳೆರೋಗಕ್ಕೆ ನಿರೋಧಕ ಶಕ್ತಿ, ಬೆಟ್ಟ ಮತ್ತು ಸಮತಟ್ಟು ಪ್ರದೇಶಕ್ಕೆ ಸೂಕ್ತ) ತಳಿಗಳು ಹೆಚ್ಚು ಪ್ರಚಲೀತವಾಗಿದ್ದು ಕೊಡಗಿನ ವಾತಾವರಣಕ್ಕೆ ಸೂಕ್ತವಾಗಿರುತ್ತದೆ.

**ಸಸ್ಯಾಭಿವೃದ್ಧಿ:** ಕರಿಮೆಣಸಿನ ಸಸಿಗಳನ್ನು ಬಳ್ಳಿಯ ಹಂಬು ತುಂಡುಗಳಿಂದ ಸಸ್ಯಾಭಿವೃದ್ಧಿ ಮಾಡುವುದು ರೂಢಿಯಲ್ಲಿದೆ. ಕರಿಮೆಣಸು ಬಳ್ಳಿಯ ಮೂರು ವಿವಿಧ ಕಾಂಡದ ಬಳ್ಳಿಗಳನ್ನು ಹೊಂದಿರುತ್ತದೆ.

**ಪ್ರಾಥಮಿಕ/ಪ್ರಧಾನ ಕಾಂಡದ ಬಳ್ಳಿ :** ಇದರಲ್ಲಿ ಗೆಣ್ಣುಗಳ ಅಂತರ ಬಹು ದೂರವಿದ್ದು ಗೆಣ್ಣಿನಿಂದ ಹೊರಹೊಮ್ಮುವ ಬೇರುಗಳು ಆಧಾರ ಮರಗಳಿಗೆ ಅಂಟಿಕೊಂಡು ಬಳ್ಳಿ ಮೇಲಕ್ಕೆ ಬೆಳೆಯಲು ಸಹಾಯಕವಾಗುತ್ತವೆ. ಈ ಕಾಂಡದ ತುದಿ ಬಳ್ಳಿಯನ್ನು ಸಸ್ಯಾಭಿವೃದ್ಧಿಗೆ ಅಲ್ಪಮಟ್ಟಿಗೆ ಬಳಸಲಾಗುವುದು.

